**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 139 |
| **ಸದಸ್ಯರ ಹೆಸರು** | : | ಶ್ರೀ ಪ್ರಕಾಶ್ ಕೆ. ರಾಥೋಡ್,<br>(ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸುವ ದಿನಾಂಕ** | : | 14.02.2024. |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ.ಸಂ | ಕೇಳಿದ ಪ್ರಶ್ನೆಗಳು | ಉತ್ತರ |
|---|---|---|
| ಅ) | ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯನ್ನು ಕರ್ನಾಟಕ ಜಲಸಾರಿಗೆ ಮಂಡಳಿಯನ್ನಾಗಿ ಪರಿವರ್ತನೆ ಮಾಡಲಾಗಿದೆಯೇ; ಮಾಡಿದ್ದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಯಾವ ಇಲಾಖೆಗೆ ವಿಲೀನ ಗೊಳಿಸಲಾಗಿದೆ ಅಥವಾ ಬೇರೆ ಯಾವ ಇಲಾಖೆಗೆ ವಿಲೀನವಾಗಲು ಅವಕಾಶ ಕಲ್ಪಿಸಲಾಗಿದೆಯೇ; | ಹೌದು ದಿನಾಂಕ:19.03.2018ರಂದು ಬಂದರು ಇಲಾಖೆಯ ಎಲ್ಲಾ ಆಸ್ತಿ ಹಾಗೂ ದಾಯಿತ್ವಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿಗೆ ವರ್ಗಾಯಿಸಲಾಗಿದೆ. ಕರ್ನಾಟಕ ಜಲಸಾರಿಗೆ ಅಧಿನಿಯಮ 19ರನ್ವಯ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅಧಿಕಾರಿ/ ಸಿಬ್ಬಂದಿಗಳಿಗೆ ಮಂಡಳಿಯನ್ನು ಸೇರುವ ಆಯ್ಕೆಯನ್ನು ನೀಡಲಾಗಿದೆ. ಬೇರೆ ಇಲಾಖೆಗೆ ವಿಲೀನವಾಗಲು ಅವಕಾಶ ಇರುವುದಿಲ್ಲ. ಆದಾಗ್ಯೂ ಕೆಲವು ಸಿಬ್ಬಂದಿಗಳು/ ಅಧಿಕಾರಿಗಳು ಕರ್ನಾಟಕ ಸರ್ಕಾರದ ಸೇವೆಯಲ್ಲಿಯೇ ಮುಂದುವರಿಯಲು ಆಯ್ಕೆ ಮಾಡಿಕೊಂಡಿದ್ದಾರೆ. |
| ಆ) | ಇಲಾಖೆಯ ಅಧಿಕಾರಿ ಸಿಬ್ಬಂದಿಗಳನ್ನು ಯಾವುದೇ ಇಲಾಖೆಗೆ ವಿಲೀನಗೊಳಿಸದೇ ಇದ್ದಲ್ಲಿ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳು ಅನ್ವಯವಾಗುತ್ತದೆಯೇ; | ಕರ್ನಾಟಕ ಜಲಸಾರಿಗೆ ಮಂಡಳಿ ಅಧಿನಿಯಮ 2015ರ ಸೆಕ್ಷನ್ 19 ರಂತೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿ/ ಸಿಬ್ಬಂದಿಗಳಿಗೆ ಅವರುಗಳು ಮಂಡಳಿಗೆ ವಿಲೀನವಾಗಲು ಅಥವಾ ನಿಯೋಜನೆ ಸೇವೆಯನ್ನು ಸಲ್ಲಿಸುವ ಕುರಿತು ಆಯ್ಕೆಯನ್ನು ಲಿಖಿತ ರೂಪದಲ್ಲಿ ಸಲ್ಲಿಸಲು ಕೋರಲಾಗಿತ್ತು. ಇದಕ್ಕೆ ಉತ್ತರವಾಗಿ ಅಧಿಕಾರಿ/ ಸಿಬ್ಬಂದಿಗ ಳು ನೀಡಿದ ಲಿಖಿತ ಒಪ್ಪಿಗೆ ಪತ್ರವನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ:ಲೋಇ 111 ಪಿಎಸ್‌ಪಿ 2017 (ಭಾ-4) ದಿನಾಂಕ: 23.01.2020ರಲ್ಲಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಒಬ್ಬ ಗ್ರೂಪ್-ಎ ವೃಂದದ ಅಧಿಕಾರಿಯನ್ನು ಕರ್ನಾಟಕ ಜಲಸಾರಿಗೆ ಮಂಡಳಿಗೆ ವಿಲೀನಗೊಳಿಸಲಾಗಿದೆ. ಹಾಗೂ ಉಳಿದ 137 ಅಧಿಕಾರಿ/ಸಿಬ್ಬಂದಿಗಳನ್ನು ದಿನಾಂಕ: 01.04.2020 ರಿಂದ ಜಾರಿಗೆ ಬರುವಂತೆ ಕರ್ನಾಟಕ ಜಲಸಾರಿಗೆ ಮಂಡಳಿಗೆ ನಿಯೋಜಿಸಿದೆ. |

| | | |
|---|---|---|
| | | ಕರ್ನಾಟಕ ಜಲಸಾರಿಗೆ ಮಂಡಳಿಯ ಸೇವೆಗೆ ವಿಲೀನಗೊಳ್ಳದ ಅಧಿಕಾರಿ/ಸಿಬ್ಬಂದಿಗಳು ಮಂಡಳಿಯು ಅನುಷ್ಠಾನದ ನಿಕಟ ಪೂರ್ವದಲ್ಲಿ ಸೇವೆ ಸಲ್ಲಿಸುತ್ತಿದ್ದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿಯೇ ಮುಂದುವರೆದಿರುತ್ತಾರೆ.<br><br>ಈ ಹಿಂದೆ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ 137 ಅಧಿಕಾರಿ /ಸಿಬ್ಬಂದಿಗಳು ಜಲಸಾರಿಗೆ ಮಂಡಳಿ ಸೇವೆಗೆ ವಿಲೀನಗೊಳಿಸದೇ ಇರುವುದರಿಂದ ಅವರುಗಳಿಗೆ ಕರ್ನಾಟಕ ಜಲಸಾರಿಗೆ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳು ಅನ್ವಯವಾಗುವುದಿಲ್ಲ. |
| **ಇ)** | ಅನ್ವಯಿಸದೇ ಇದ್ದಲ್ಲಿ, ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಈ ಹಿಂದೆ ಇದ್ದ ವೃಂದ ಮತ್ತು ನೇಮಕಾತಿ ನಿಯಮವು ಅನ್ವಯವಾಗುವುದೇ? | ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ವಿಲೀನಗೊಳ್ಳದೇ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಈ ಹಿಂದೆ ಇದ್ದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, 2010 ಅನ್ವಯಿಸುತ್ತವೆ. |

**No.IDD 17 BNS 2024**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**